ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ೨೩ನೇ ಮಾರ್ಚ್ ೧೯೯೪, ಚೈತ್ರ ೯, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ. ಎಸ್. ಕೌಜಲಗಿ)ರವರು ಪೀಠವನ್ನು ಅಲಂಕರಿಸಿದ್ದರು.

ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ರಾಜ್ಯದಲ್ಲಿ ಗ್ರಾಮ ಪಂಚಾಯತಿಯ ಅಧ್ಯಕ್ಷರು ಉಪಾಧ್ಯಕ್ಷರ ಚುನಾವಣೆಯಲ್ಲಿ ನಡೆದ ಗಲಭೆ ಹಾಗೂ ಅವ್ಯವಹಾರದ ಬಗ್ಗೆ ನ್ಯಾಯಾಂಗ ತನಿಖೆಗೆ ಒತ್ತಾಯ.

(ಸಭೆ ಪ್ರಾರಂಭವಾದಾಗ ಜನತಾದಳ ಸದಸ್ಯರು ಧರಣಿ ಕುಳಿತಿದ್ದರು)

+ ಶ್ರೀ ಆರ್. ವಿ. ದೇಶಪಾಂಡೆ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಮ್ಮ ಬೇಡಿಕೆಗಳನ್ನು ನಿನ್ನೆ ನಾವು ಇಟ್ಟಿದ್ದೇವೆ. ಗುಲ್ಬರ್ಗ ಮತ್ತು ಬಳ್ಳಾರಿಗಳಲ್ಲಿ ಏನು ಫೈರಿಂಗ್ ಆಗಿದೆ ಅದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು ಎಂದು ನಾವು ವಿನಂತಿ ಮಾಡಿದ್ದೇವೆ. ಅದರ ಪ್ರಕಾರ ಸರ್ಕಾರ ಒಪ್ಪಿಕೊಂಡಿಲ್ಲ. ಒಂದು ಸದನ ಸಮಿತಿಯನ್ನು ಮಾಡಿ ಎಲ್ಲೆಲ್ಲಿ ಇಂತಹ ಗಲಭೆಗಳಾಗಿವೆ ಅಲ್ಲೆಲ್ಲ ಎನ್‌ಕ್ವೈರಿ ಮಾಡಬೇಕೆಂದು ನಾವು ಒತ್ತಾಯ ಮಾಡಿದ್ದೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ ಏನೂ ಹೇಳಿಲ್ಲ. ನಾನು ಬಹಳ ನೊಂದ ಮನಸ್ಸಿನಿಂದ ಹೇಳುತ್ತೇನೆ, ಅವರು ಇದನ್ನು ಬಹಳ ಲಘುವಾಗಿ ತೆಗೆದುಕೊಂಡು ಇದರ ಬಗ್ಗೆ ಒಂದು ಮಾತೂ ಪ್ರಸ್ತಾಪ ಮಾಡಿಲ್ಲ. ಹಾಗಾಗಿ ನಮಗೆ ಬೇರೆ ಆಲ್ಟರ್‌ನೇಟಿವ್ ಇಲ್ಲ. ಈ ನಮ್ಮ ಡಿಮಾಂಡ್ ಫುಲ್‌ಫಿಲ್ ಆಗುವತನಕ ನಾವು ಧರಣಿ ಕಂಟಿನ್ಯೂ ಮಾಡುತ್ತೇವೆ. ಸದನದ ಕಲಾಪಕ್ಕೆ ಅಡ್ಡಿ ಮಾಡಬೇಕೆನ್ನುವ ಇಚ್ಛೆ ನಮಗೆ ಇಲ್ಲ. ನಮಗೆ ಗೊತ್ತಿದೆ, ಸದನ ನಡೆಯುವಾಗ ನಾವು ಸಹಕರಿಸಬೇಕಾಗುತ್ತದೆ. ಬಹಳ ಮಹತ್ವದ ವಿಷಯಗಳಿವೆ. ಅದೆಲ್ಲ ನಮಗೆ ಗೊತ್ತಿದೆ. ಆದರೆ ನಾವು ನಿನ್ನೆ ಪ್ರಸ್ತಾಪ ಮಾಡಿದ ವಿಷಯ ಬಹಳ ಮುಖ್ಯವಾದುದು ಇದೆ. ಇವತ್ತು ಹಳ್ಳಿ ಹಳ್ಳಿಗಳಲ್ಲಿ ಗಲಾಟೆ ಗಲಭೆಗಳು ನಡೆಯುತ್ತಿವೆ. ಎಷ್ಟೋ ಜನ ಇವತ್ತು ಹಳ್ಳಿಗಳನ್ನು ಬಿಟ್ಟು ಹೋಗಿದ್ದಾರೆ. ಹಳ್ಳಿಯಲ್ಲಿ ಇವತ್ತು ನೆಮ್ಮದಿಯಿಂದ ಉಳಿದುಕೊಳ್ಳುವುದಕ್ಕೆ ಒಳ್ಳೆಯ ವಾತಾವರಣವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ವಿಚಾರಣೆಗೆ ಆರ್ಡರ್ ಮಾಡಿದರೆ, ಒಂದು ಸಮಿತಿ ಬರುತ್ತದೆಂದು ಹೇಳಿದರೆ ಏನಾಗುತ್ತದೆಂದರೆ, ಜನರಲ್ಲಿ ವಿಶ್ವಾಸ ಬರುತ್ತದೆ. ಯಾರು ಇಂತಹ ಕೆಲಸ ಮಾಡುತ್ತಾರೆ ಅವರು ಯಾವ ಭಾಗದಲ್ಲಿಯೇ ಇರಬಹುದು ಯಾವ ಪಕ್ಷದವರೇ ಇರಬಹುದು ಇನ್ನು ಮುಂದೆ ಮಾಡಲಿಕ್ಕೆ ಅವರಿಗೆ ಅವಕಾಶವಿರುವುದಿಲ್ಲ. ಪುನಃ ಏಪ್ರಿಲ್‌ನಲ್ಲಿ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಎಲೆಕ್ಷನ್ ಆಗುತ್ತದೆ. ಇದೇ ಪ್ರಕಾರ ಗಲಭೆ ಗಲಾಟೆಗಳು ಮುಂದೆ ಆದರೆ ಹೇಗೆ? ಹಾಗಾಗಿ ಸರ್ಕಾರ ಒಂದು ದಿಟ್ಟ ನಿಲುವನ್ನು ತಾಳಿದರೆ ಒಂದು ರೀತಿಯ ಪರಿಣಾಮವುಂಟಾಗುತ್ತದೆ. ಆ ದೃಷ್ಟಿಯಿಂದ ನಾನು ಪುನಃ ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿ ಮಾಡುತ್ತಿದ್ದೇನೆ. ನಾವು ನಿನ್ನೆ ಏನು ಡಿಮಾಂಡ್ ಇಟ್ಟಿದ್ದೇವೆ ಅದನ್ನು ದಯಮಾಡಿ ತಾವು ಒಪ್ಪಿಕೊಳ್ಳಿ. in the interest of the State, in the interest of the panchayat system. ಇಲ್ಲವೆಂದರೆ ಎಂಟೈರ್ ಪಂಚಾಯತ್ ಸಿಸ್ಟಂ ಡೆಸ್ಟ್ರಾಯ್ ಮಾಡಿದ ರೆಸ್ಪಾನ್ಸಿಬಿಲಿಟಿ ನಿಮ್ಮ ಮೇಲೆ ಬರುತ್ತದೆ.